ಸಾಕ್ಷಿಯನ್ನು ದಿಃ 15.11.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಎಸ್ ಜೆ ವಕೀಲರಿಂದಃ**

ನಾನು ಪಿ ಯು ಸಿ ರವರೆಗೆ ವಿದ್ಯಾಬಾಸ ಮಾಡಿರುತ್ತೇನೆ. ಈ ದಾವೆಯನ್ನು ಹಾಕುವಾಗ ನನ್ನ ತಾಯಿ ಜೀವಂತ ಇದ್ದರು. ಈ ದಾವೆಯನ್ನು ಹುಸೇನಸಾಬ ಹಾಗೂ ಹೊಲ ಹಿಡಿದವರ ಮೇಲೆ ಸಲ್ಲಿಸಿರುತ್ತಾರೆ. ನನ್ನ ತಾಯಿಯ ಮೇಲೆ ಈ ದಾವೆಯನ್ನು ಸಲ್ಲಿಸಿಲ್ಲ. ಈ ದಾವಾ ಆಸ್ತಿ ಸರ್ವೇ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ತಾಯಿಯವರು ಯಾವ ವಕೀಲರನ್ನು ನೇಮಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯವರು ತಮ್ಮ ವಕೀಲರ ಮೂಲಕ 1 ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಅಳವಡಿಸಿಕೊಳ್ಳಲು ಮೆಮೋವನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಲ್ಲಿಕಸಾಬ ಇವರು ಯಾವಾಗ ಮೃತ ಪಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಲ್ಲಿಕಸಾಬ ಇವರು ಎಷ್ಟು ಆಸ್ತಿ ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಅವರಿಗೆ ಪಿತ್ರಾರ್ಜಿತ ಆಸ್ತಿಗಳು ಇದ್ದವು. ಮಲ್ಲಿಕಸಾಬನಿಗೆ 3 ಜನ ಮಕ್ಕಳು. ಅವರೆಂದರೆ ಅಲ್ಲಿಸಾಬ, ಫಕೀರಸಾಬ ಹಾಗೂ ಚಾಂದಬಿ. ಅಲ್ಲಿಸಾಬ, ಫಕೀರಸಾಬ ಇಬ್ಬರು ಜಂಟಿಯಾಗಿ 1958 ರಲ್ಲಿ ಸರ್ವೇ ನಂ. 37 ನ್ನು ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾಂದಬಿ ಇವರು ಸರ್ವೇ ನಂ. 137/1 ರಲ್ಲಿ 6 ಎಕರೆ 32 ಗುಂಟೆ ಜಮೀನನ್ನು ರೂ. 6,000 ಗಳಿಗೆ ಖರೀದಿ ಹಿಡಿದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 37 ರಲ್ಲಿ 7 ಎಕರೆ 20 ಗುಂಟೆ ಜಮೀನು ನೂರಜಾನ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಗದಗನ ಸಿವಿಲ್ ಆದೇಶದ ಪ್ರಕಾರ ಓ ಎಸ್ ನಂ. 519/1984 ರ ಪ್ರಕಾರ ಸರ್ವೇ ನಂ. 154/2 ಎ+2 ಬಿ/1 ಹಾಗೂ 169/3 ಎ+3 ಬಿ ಕ್ಷೇತ್ರ 3 ಎ-56 ಗುಂಟೆ 3 ನೇ ಪ್ರತಿವಾದಿಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 77/1 ಜಮೀನು 6 ಹಾಗೂ 7 ನೇ ಪ್ರತಿವಾದಿಯ ಹೆಸರಿನಿಂದ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸರ್ವೇ ನಂ. 37 ಕ್ಷೇತ್ರ 30 ಎಕರೆ 20 ಗುಂಟೆ ಇದರ ಪೈಕಿ 7 ಎಕರೆ ಹಸನಸಾಬ ಹೆಸರಿನಿಂದ ಇರುತ್ತದೆ ಹಾಗೂ ಉಳಿದ ಕ್ಷೇತ್ರ ಹಸನಸಾಬ ಹಾಗೂ ಹುಸೇನಸಾಬ ಹಾಗೂ ಹಸನಸಾಬ ಇವರ

ಕುಟುಂಬಕ್ಕೆ ಜಂಟಿಯಾಗಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಸರ್ವೆಗೆ ಸಂಬಂಧಪಟ್ಟಂತೆ 6 ಎಕರೆ ಜಮೀನನ್ನು 1 ನೇ ಪ್ರತಿವಾದಿ ಇವರು ಬಾಬುಸಾಬ ಇವರಿಗೆ ದಾನ ಪತ್ರವನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ. 154/2 ಬಿ/2 2 ಎಕರೆ 9 ಗುಂಟೆ ಹನುಮಮ್ಮ ಹಾಗೂ ರಾಮಪ್ಪ ಇವರ ಕಡೆಯಿಂದ ದಿಃ 23.12.1993 ರಲ್ಲಿ ರೂ. 15,000 ಗಳಿಗೆ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 09.05.1992 ರಂದು 1 ನೇ ಪ್ರತಿವಾದಿಯಿಂದ ನನ್ನ ತಾಯಿಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲದ ಕಾರಣ 1 ನೇ ಪ್ರತಿವಾದಿಯ ಆಸ್ತಿಯಲ್ಲಿ ನಮಗೆ ಭಾಗ ಬೇಡ ಎಂದು 1 ಲಕ್ಷ ಹಣವನ್ನು ಪಡೆದುಕೊಂಡು ನನ್ನ ತಾಯಿ 1 ನೇ ಪ್ರತಿವಾದಿಗೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂ. 956/1 5 ಎ-30 ಗುಂಟೆ ಜಮೀನನ್ನು ಹನುಮಂತ ಇವರ ಕಡೆಯಿಂದ ದಿಃ 28.03.2003 ರಲ್ಲಿ ರೂ. 1,28,000 ಗಳಿಗೆ 1 ಹಾಗೂ 2 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೇ ನಂ. 37 ಎಷ್ಟು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ. 37 ನ್ನು ನಾವು ಗೌಡರ ಹೊಲ ಎಂದು ಕರೆಯುತ್ತೇವೆ. ಸರ್ವೇ ನಂ. 37/1, 154, 169 ಹಾಗೂ 77/1 ಎಷ್ಟು ಕ್ಷೇತ್ರ ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಾಯಿಯು ಒಪ್ಪಿಗೆ ಪತ್ರ ಬರೆದುಕೊಟ್ಟ ಕಾರಣ ಆಸ್ತಿಯಲ್ಲಿ ನಮಗೆ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

C/c ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ